ಸಿ ಸಿ ನಂ. 2112/2024
ಪಿ.ಡಬ್ಲ್ಯೂ 1

ಸಿ.ಸಿ. ನಂಬರ್: **2112/2024**

ಪಿ.ಡಬ್ಲ್ಯೂ:**1**

ದಿ:**18-12-2025** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀಸವಾಲು: ಆರೋಪಿ ಪರ ವಕೀಲರವರಿಂದ.**

1. ನಾನು ಎಮ್ ಎಸ್ ಸಿ ಮತ್ತು ಎಮ್ ಪಿ ಎಲ್ ಪದವಿಯನ್ನು ಹೊಂದಿರುತ್ತೇನೆ. ನನ್ನ ಪ್ರಮಾಣ ಪತ್ರಕ್ಕೆ ಸಾಕ್ಷಿಯನ್ನು ನಾನೇ ನೀಡಿರುತ್ತೇನೆ. ನನ್ನ ಪ್ರಮಾಣೀಕೃತ ಹೇಳಿಕೆಯಲ್ಲಿ ನಾನು ವೈ ಬಿ ಅಣ್ಣೀಗೇರಿ ಪಿ ಯು ಸೈನ್ಸ ಕಾಲೇಜ್ ನ ಪ್ರೀನ್ಸಿಪಾಲ್ ಎಂದು ನಮೂದು ಮಾಡಿದ್ದೇನೆ ಎಂದರೆ ಸಾಕ್ಷಿಯು ನಾನು ಪ್ರಿನ್ಸಿಪಾಲ್ ಹಾಗೂ ಸದರಿ ಕಾಲೇಜ್ ದ ಮಾಲೀಕ ಇರುತ್ತೇನೆ ಎಂದು ಹೇಳುತ್ತಾರೆ. ನಾನು ಹಾಗೂ ನನ್ನ ಹೆಂಡತಿ ಸದರಿ ಕಾಲೇಜ್ ದ ಮಾಲೀಕರು ಇರುತ್ತೇವೆ.

2. ಪ್ರತಿ ವರ್ಷ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಿ, ಪ್ರಥಮ ಪಿಯುಸಿಗೆ ದಾಖಲಾಗುತ್ತಾರೆ. ನಮ್ಮ ಕಾಲೇಜ್ ಗೆ ಶಿಕ್ಷಣ ಇಲಾಖೆಯಿಂದ ಪರವಾನಿಗೆಯನ್ನು ತೆಗೆದುಕೊಂಡಿರುತ್ತೇನೆ. ಎಸ್ ಎಸ್ ಎಲ್ ಸಿ ಫಲಿತಾಂಶ ಬಂದ ನಂತರ ಪ್ರಥಮ ವರ್ಷಕ್ಕೆ ಎಪ್ರಿಲ್ ತಿಂಗಳು ಕೊನೆಯಲ್ಲಿ ಹಾಗೂ ಮೇ ತಿಂಗಳಲ್ಲಿ ಪ್ರವೇಶ ದಾಖಲಾತಿ ಪ್ರಾರಂಭ ಆಗುತ್ತದೆ. ನನ್ನ ಪ್ರಕಾರ ಎಸ್ ಎಸ್ ಎಲ್ ಸಿ ಪಲಿತಾಂಶ ಎಪ್ರಿಲ್ ಅಥವಾ ಮೇ ತಿಂಗಳಲ್ಲಿ ಬರುತ್ತದೆ. ವಿದ್ಯಾರ್ಥಿಗಳಿಂದ ಬಂದ ಪ್ರವೇಶ ಶುಲ್ಕ ನಮ್ಮ ಕಾಲೇಜ್ ನ ಖಾತೆಗೆ ಜಮಾ ಆಗುತ್ತದೆಯಾ ಎಂದರೆ ಸಾಕ್ಷಿಯು ಕೆಲವರು ಆನಲೈನ್ ಮಾಡುತ್ತಾರೆ, ಕೆಲವರು ನಗದು ರೂಪದಲ್ಲಿ ಶುಲ್ಕವನ್ನು ಕೊಡುತ್ತಾರೆ ಎಂದು ಹೇಳುತ್ತಾರೆ.

3. ನನಗೆ 2013 ರಿಂದ ಇಲ್ಲಿಯವರೆಗೆ ನನಗೆ ಆರೋಪಿಯು ಪರಿಚಯವಿರುತ್ತಾನೆ, ಹಾಗೂ ಈಗಲೂ ಸಹ ನನಗೆ ಆತ್ಮೀಯವಿರುತ್ತಾನೆ ಎಂದು ಹೇಳುತ್ತಾರೆ. ನನ್ನ ಹಾಗೂ ಆರೋಪಿಯ ಮಧ್ಯೆ ಏನು ವ್ಯವಹಾರ ಎಂದರೆ

ಸಾಕ್ಷಿಯು 2016 ರಿಂದ 2019 ರವರೆಗೆ ಆರೋಪಿಯ ಕಟ್ಟಡವನ್ನು ನಮ್ಮ ವಿದ್ಯಾರ್ಥಿಗಳ ವಸತಿ ನಿಲಯಕ್ಕಾಗಿ ಬಾಡಿಗೆ ಪಡೆದುಕೊಂಡಿದ್ದೆನು ಹಾಗೂ ಅದಕ್ಕೆ ರೂ.5,00,000/- ಡೆಪಾಸಿಟ್ ಹಣ ಕೊಟ್ಟಿದ್ದೆ. ಆರೋಪಿಯು ನನಗೆ ಪರೋಕ್ಷ ಮತ್ತು ಪ್ರತ್ಯೇಕವಾಗಿ ಸಹಾಯ ಮಾಡುತ್ತಾ ಬಂದಿರುತ್ತಾರೆ, ಹಾಗಾಗಿ ನಮಗೆ ಆತ್ಮೀಯತೆ ಬೆಳೆಯಿತು. ನನ್ನ ನೋಟಿಸ್ ದಲ್ಲಿ ಆಗಲೀ ಹಾಗೂ ಸಾಕ್ಷಿ ಪ್ರಮಾಣ ಪತ್ರದಲ್ಲಿ ಆಗಲೀ ಮತ್ತು ದೂರಿನಲ್ಲಿ ಆಗಲೀ ಆರೋಪಿಯು 2013 ರಿಂದ ಪರಿಚಯವಿದ್ದ ಹಾಗೂ 2016 ರಿಂದ 2019 ರವರೆಗೆ ಆರೋಪಿಯ ಕಟ್ಟಡವನ್ನು ಬಾಡಿಗೆಗಾಗಿ ಪಡೆದುಕೊಂಡಿದ್ದೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಬಾಡಿಗೆ ಪಡೆದುಕೊಂಡಿದ್ದೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸುತ್ತೇನೆ.

4. ನನ್ನ ಪಿರ್ಯಾದಿಯಲ್ಲಾಗಲೀ ಅಥವಾ ನೋಟಿಸ್ ದಲ್ಲಾಗಲೀ ಹಾಗೂ ಪ್ರಮಾಣ ಪತ್ರದಲ್ಲಿ ಆಗಲೀ ಯಾವ ದಿನಾಂಕದಂದು ಆರೋಪಿಗೆ ಹಣವನ್ನು ಕೊಟ್ಟಿರುತ್ತೇನೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ನಾನು ಹೇಳುವ ರೀತಿ ಆರೋಪಿಗೆ ಯಾವುದೇ ಹಣವನ್ನು ನೀಡಿಲ್ಲ, ನೀಡದೇ ಇದ್ದಿದ್ದರಿಂದ ನಾನು ನಿರ್ದಿಷ್ಟವನ್ನು ದಿನಾಂಕವನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. 2020 ರ ಮಾರ್ಚ್ ದಿಂದ ಕೋವಿಡ್-19 ಬಂದಿದ್ದರಿಂದ ಎಲ್ಲ ವ್ಯವಹಾರ ಗಳು ಹಾಗೂ ಕಾಲೇಜ್ ಗಳು ಬಂದ್ ಆಗಿದ್ದವು ಎಂದರೆ ಸರಿ. ಕೋವಿಡ್ ಕಾರಣದಿಂದ ಎಸ್ ಎಸ್ ಎಲ್ ಸಿ ಪಲಿತಾಂಶ 2020 ರ ಜುಲೈ ತಿಂಗಳಲ್ಲಿ ಬಂದಿತ್ತು ಎಂದರೆ ಸರಿ. ಸದರಿ ಸಮಯದಲ್ಲಿ ಎಲ್ಲ ಕಾಲೇಜ್ ಗಳಲ್ಲಿ ಹಾಗೂ ನಮ್ಮ ಕಾಲೇಜ್ ಗಳಲ್ಲಿ ದಾಖಲಾತಿಯು ಅಗಸ್ಟ ಸೆಪ್ಟಂಬರ್ 2020 ರ ನಂತರ ಪ್ರಾರಂಭ ಆದವು ಎಂದರೆ ಸರಿ.

5. ನನ್ನ ಪಿರ್ಯಾದಿಯಲ್ಲಿ ಪ್ಯಾರಾ ನಂ. 5 ರಲ್ಲಿ ಎಪ್ರಿಲ್ 2020 ರಂದು ಯಾವುದೇ ದಾಖಲಾತಿಗಳು ಇರಲಿಲ್ಲ, ಮತ್ತು ಆ ಸಮಯದಲ್ಲಿ ವಿದ್ಯಾರ್ಥಿಗಳ ದಾಖಲಾತಿಯ ಶುಲ್ಕದಿಂದ ಆರೋಪಿಗೆ ಸಾಲ ನೀಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಕಾಲೇಜ್

ನ್ನು 2013 ರಲ್ಲಿ ಪ್ರಾರಂಭಸಿರುತ್ತೇನೆ. ಹಾಗೂ ಅದಕ್ಕಿಂತ ಮೊದಲು ದ್ವಿತೀಯ ಪಿ ಯು ಸಿ ವಿದ್ಯಾರ್ಥಿಗಳು ಸಹ 2019 ರಲ್ಲಿ ದಾಖಲಾತಿ ಮಾಡಿಕೊಳ್ಳಲಾಗಿತ್ತು ಎಂದು ಹೇಳುತ್ತಾರೆ. ಮಾರ್ಚ 2020 ರಲ್ಲಿ ಲಾಕಡೌನ ಆದ ನಂತರ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೊರಗೆ ಬರುವುದು ಬಂದ್ ಇತ್ತು ಹಾಗೂ ಸಾರಿಗೆ ವ್ಯವಸ್ಥೆ ಬಂದ್ ಇತ್ತು ಹಾಗಾಗಿ ದ್ವಿತೀಯ ಪಿಯುಸಿಯ ದಾಖಲಾತಿ ಮಾಡಿಕೊಳ್ಳದೇ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಲಾಕಡೌನ್ ಆಗಿದ್ದು 2020 ಮಾರ್ಚ ಆಗಿದ್ದು ಹಾಗೂ ನಮಗೆ ದಿಃ19-03-2020 ರವರೆಗೆ ವಿದ್ಯಾರ್ಥಿಗಳ ಪಿ ಯುಸಿ ಪರೀಕ್ಷೆ ನಡೆದಿತ್ತು, ಹಾಗೂ ಆ ಸಮಯದಲ್ಲಿ ಶುಲ್ಕ ಜಮಾ ಆಗಿತ್ತು ಎಂದು ಹೇಳುತ್ತಾರೆ. ಪರೀಕ್ಷೆ ನಡೆಯುವ ಸಮಯದಲ್ಲಿ ಶುಲ್ಕ ಪಡೆದುಕೊಳ್ಳುವ ಸಂದರ್ಭ ಇರುವುದಿಲ್ಲ ಆದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.